# ಕಲ್ಪನೆ



ನದಿಯ ನೀರಿನಲ್ಲಿ ಸೈಕಲ್ ಚೊಕ್ಕ ಮಾಡುತ್ತಾ ತಲ್ಲೀನರಾಗಿರುವ ಪುಟಾಣಿಗಳಿಬ್ಬರ ಕಂಗಳಲ್ಲಿ ಏನು ಕನಸಿರಬಹುದು ? ಹೊಲದ ಅಂಚಿನ ರಸ್ತೆ, ಡಾಂಬರು ರೋಡು, ಗದ್ದೆಯ ಬದುಗಳಲ್ಲಿ,ಕಾಡಿನ ಇರುಕಲುಗಳಲ್ಲಿ, ಪೇಟೆಯ ಸಂದಿಗಳಲ್ಲಿ ಸೈಕಲ್ ಓಡಿಸುತ್ತ ಸಾಗುವ ಅವರ ಖುಷಿಯನ್ನು ಅಳೆಯಲು ಕೊಳಗವೇ ಇಲ್ಲ. ತಂಗಾಳಿಗೆ ಮುಖವೊಡ್ಡಿ ಪೆಡಲ್ ಮಾಡುತ್ತ ಮುಂದೊತ್ತುವಾಗ ಹಸಿವಿನ ಹಂಗಿಲ್ಲ. ಸೈಕಲ್ ರಥವನ್ನು ಶುಚಿಮಾಡುತ್ತಿರುವ ಈ ಮಹಾರಥಿಗಳ ಚಿತ್ರವನ್ನು ನೋಡುವಾಗ ನಿಮಗೇನನಿಸುತ್ತದೆ. ಪುಟ್ಟದೊಂದು ಕವನವು ಮನಸ್ಸಿನಲ್ಲಿ ಪಡಿಮೂಡಿದೆಯೇ ? ಆ ಕವಿತೆಯನ್ನು ನಮಗೆ ಬರೆದು ಕಳಿಸುವಿರಾ ?

ನಿಮ್ಮ ಕಲ್ಪನೆಯ ಕವಿತೆಯನ್ನು ಬರೆದು ನಮಗೆ ಕಳುಹಿಸಲು ಕೊನೆಯ ದಿನಾಂಕ ಆಗಸ್ಟ್15.

**ಚಿತ್ರ: ಶಿವಮೊಗ್ಗ ನಾಗರಾಜ್**

---

ವಿಳಾಸ: ಕಲ್ಪನೆ ವಿಭಾಗ, 'ಮಯೂರ'
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
**ಇ–ಮೇಲ್:** editormy@mayura.co.in